# ಎಕ್ಕೆ ಗಿಡ



ಎಕ್ಕೆ ಗಿಡ ಸಾಮಾನ್ಯವಾಗಿ ರಸ್ತೆಗಳ ಪಕ್ಕದಲ್ಲಿ, ಕುರುಚಲು ಮತ್ತು ಬಯಲು ಪ್ರದೇಶಗಳಲ್ಲಿ ಬೆಳೆಯುತ್ತದೆ. ಇದರ ಎಲೆಗಳಲ್ಲಿ ಮತ್ತು ಕಾಂಡದಲ್ಲಿ ಹಾಲಿನಂತಹ ಬಿಳಿ ದ್ರವ ತುಂಬಿರುವುದರಿಂದ, ಇದಕ್ಕೆ ಇಂಗ್ಲಿಷ್ ನಲ್ಲಿ 'ಜೈಂಟ್ ಮಿಲ್ಕ್ ವೀಡ್' ಎಂಬ ಹೆಸರಿದೆ. ಎಕ್ಕೆ ಗಿಡಕ್ಕೆ ಸಣ್ಣ-ಪುಟ್ಟ ಪ್ರಾಣಿ, ಪಕ್ಷಿ, ಕೀಟಗಳು ಆಗಾಗ್ಗೆ ಭೇಟಿ ನೀಡುತ್ತವೆ.



ಈ ಸಸ್ಯಕ್ಕೆ ಅನೇಕ ಹೆಸರುಗಳಿವೆ: ಇಂಗ್ಲಿಷ್ ನಲ್ಲಿ ಇದು 'ಜೈಂಟ್ ಮಿಲ್ಕ್ ವೀಡ್', ಕನ್ನಡದಲ್ಲಿ 'ಯಕ್ಕ' ಅಥವಾ 'ಎಕ್ಕೆ ಗಿಡ', ಮತ್ತು ಹಿಂದಿಯಲ್ಲಿ 'ಆಕ್' ಎಂದು ಕರೆಯುತ್ತಾರೆ. ನಿಮ್ಮ ನೆರೆಹೊರೆಯಲ್ಲಿ ಈ ಸಸ್ಯವನ್ನು ಏನೆಂದು ಕರೆಯುತ್ತಾರೆ?

ಈ ಗಿಡದ ಬಿಳಿ ದ್ರವವನ್ನು ಹೆಚ್ಚು ಪ್ರಮಾಣದಲ್ಲಿ ಸೇವಿಸುವುದು ಮನುಷ್ಯರಿಗೆ ಮತ್ತು ಕೆಲವು ಪ್ರಾಣಿಗಳಿಗೆ ಹಾನಿಕರವಾಗಿದೆ. ಇದು ಎಕ್ಕೆ ಗಿಡವು ತನ್ನ ಎಲೆಗಳನ್ನು ತಿನ್ನಲು ಬರುವ ಪ್ರಾಣಿ-ಕೀಟಗಳಿಂದ ತನ್ನನ್ನು ರಕ್ಷಿಸಿಕೊಳ್ಳುವ ವಿಧಾನವಾಗಿದೆ. ಈ ದ್ರವ ಚರ್ಮ ಮತ್ತು ಕಣ್ಣುಗಳ ಮೇಲೆ ಬಿದ್ದರೆ ಉರಿಯುಂಟಾಗುತ್ತದೆ. ಹಾಗಾಗಿ ಎಕ್ಕೆ ಗಿಡದ ಎಲೆಗಳನ್ನು, ತೊಗಟೆಯನ್ನು ಮುಟ್ಟಿದ ನಂತರ ಸಾಬೂನು ಮತ್ತು ನೀರಿನಿಂದ ನಿಮ್ಮ ಕೈಗಳನ್ನು ಚೆನ್ನಾಗಿ ತೊಳೆಯಿರಿ.

ಈ ರೀತಿ ಸಸ್ಯಗಳು ತಮ್ಮನ್ನು ತಾವೇ ಮನುಷ್ಯರಿಂದ, ಇತರೆ ಪ್ರಾಣಿಗಳಿಂದ ರಕ್ಷಿಸಿಕೊಳ್ಳುವ ಇತರ ವಿಧಾನಗಳನ್ನು ಹೇಳಬಲ್ಲಿರಾ?





## ಎಲೆಗಳು

ಎಕ್ಕೆ ಗಿಡದ ಎಲೆಗಳು ತಿಳಿ ಹಸಿರು ಬಣ್ಣದ, ಅಂಡಾಕಾರದ ಎಲೆಗಳಾಗಿವೆ. ಒಮ್ಮೊಮ್ಮೆ ಪಟ್ಟೆ ಪಟ್ಟೆ ಕಂಬಳಿಹುಳುಗಳು ಈ ಎಲೆಗಳನ್ನು ತಿನ್ನುತ್ತಿರುವುದನ್ನು ನೀವು ಕಾಣಬಹುದು; ಇವು ಸಾಮಾನ್ಯ ಹುಲಿ ಚಿಟ್ಟೆಯ ಕಂಬಳಿಹುಳುಗಳು. ಈ ಚಿಟ್ಟೆಗಳಿಗೆ ಎಕ್ಕೆ ಗಿಡ 'ಆತಿಥೇಯ ಸಸ್ಯ', ಅಂದರೆ ಈ ಚಿಟ್ಟೆಗಳು ಎಕ್ಕೆ ಎಲೆಗಳ ಮೇಲೆ ತಮ್ಮ ಮೊಟ್ಟೆಗಳನ್ನು ಇಟ್ಟು, ಮರಿಹುಳುಗಳು ಮೊಟ್ಟೆಗಳಿಂದ ಹೊರಬಂದ ಮೇಲೆ ಅವು ಅದೇ ಎಲೆಗಳನ್ನು ಆಹಾರವಾಗಿ ತಿಂದು, ಚಿಟ್ಟೆ ಆಗುವವರೆಗೂ ಅಲ್ಲೇ ಬದುಕುತ್ತವೆ.

ಆ ಚಿಟ್ಟೆಯನ್ನು ಗಮನವಿಟ್ಟು ನೋಡಿ, ಯಾವ ಯಾವ ಬಣ್ಣಗಳಿವೆ? ಆ ಚಿಟ್ಟೆಯ ಹೆಸರಿನಲ್ಲಿ, 'ಹುಲಿ' ಎಂಬ ಪದ ಯಾಕಿದೆ?

## ಹೂವುಗಳು

ಎಕ್ಕೆ ಹೂವುಗಳ ಬಣ್ಣ ತಿಳಿ ನೇರಳೆ ಆಗಿದ್ದು, ಅನೇಕರು ಈ ಹೂವುಗಳು ಕಿರೀಟದಂತೆ ಕಾಣುತ್ತದೆ ಎನ್ನುತ್ತಾರೆ. ಅದಕ್ಕಾಗಿಯೇ ಎಕ್ಕೆ ಗಿಡವನ್ನು ಇಂಗ್ಲಿಷ್ ನಲ್ಲಿ 'ಕ್ರೌನ್ ಫ್ಲವರ್' (ಕಿರೀಟದ ಹೂವು) ಎಂದು ಕೂಡ ಕರೆಯುತ್ತಾರೆ. ಎಕ್ಕೆ ಹೂವನ್ನು ಆಹಾರವಾಗಿ ತಿನ್ನುವ ಕೀಟಗಳಲ್ಲಿ, ಜೇನುನೊಣಗಳು, ಚಿಟ್ಟೆಗಳು, ಜೀರುಂಡೆಗಳು, ಗುಂಗುರುಗಳು ಮತ್ತು ಕಣಜಗಳು ಮುಖ್ಯವಾದವು, ಸದಾ ಗುಂಯ್ ಎನ್ನುತ್ತಾ ಗಲಾಟೆ ಮಾಡುವ, ದೊಡ್ಡ ನೀಲಿಗಪ್ಪು ಬಣ್ಣದ ಬಡಗಿ ಜೇನುನೊಣವೂ ಈ ಕೀಟಗಳಲ್ಲಿ ಸೇರಿದೆ.









## ಹಣ್ಣು ಮತ್ತು ಬೀಜಗಳು

ಎಕ್ಕೆ ಗಿಡದ ಹಣ್ಣು ಅಥವಾ ಬೀಜಕೋಶಗಳ ಒಳಗೆ ಸಣ್ಣ, ಚಪ್ಪಟೆಯಾದ ಬೀಜಗಳು ಇರುತ್ತವೆ. ಈ ಬೀಜಗಳು ಅತಿ ಹಗುರವಾಗಿದ್ದು, ಪ್ರತಿ ಬೀಜಕ್ಕೆ ಕೂದಲಿನಂತಹ ನಾರುಗಳ ಬಿಳಿ ಬಾಲವಿರುತ್ತದೆ. ಬೀಜದ ಕೋಶ ಅರಳಿದಾಗ ಈ ಬೀಜಗಳು ಗಾಳಿಯಲ್ಲಿ ಹಗೂರವಾಗಿ ತೇಲಿ ಹೋಗುತ್ತವೆ. ಕೆಲವು ಪಕ್ಷಿಗಳು ಈ ಬಿಳಿ, ತುಪ್ಪಲಿನಂತಹ ನಾರನ್ನು ತಮ್ಮ ಗೂಡು ಕಟ್ಟಲು ಬಳಸಿ, ತಮ್ಮ ಮರಿಗಳಿಗೆ ಗೂಡು ಮೃದುವಾಗಿರುವಂತೆ ಮಾಡುತ್ತವೆ.

ನಿಮಗೆ ಎಕ್ಕೆ ಬೀಜ ಸಿಕ್ಕರೆ ಅದನ್ನು ನಿಮ್ಮ ಅಂಗೈಯಲ್ಲಿ ಇರಿಸಿ, ನಿಧಾನವಾಗಿ ಊದಿ, ಅದು ಗಾಳಿಯಲ್ಲಿ ತೇಲುತ್ತದೆಯೇ ಎಂದು ಗಮನಿಸಿ.





## ಕಾಂಡ ಮತ್ತು ತೊಗಟೆ

ಎಕ್ಕೆ ಗಿಡದ ರಸಭರಿತ ಕಾಂಡಗಳು ಬಲವಾಗಿದ್ದು, ಗಿಡದ ಬುಡದ ಹತ್ತಿರ ಹೆಚ್ಚು ಹರಡಿಕೊಂಡಿರುತ್ತವೆ. ಯಾವುದಾದರು ಕಾಂಡ ಅಥವಾ ಎಲೆ ಮುರಿದ ಜಾಗವನ್ನು ಸೂಕ್ಷ್ಮವಾಗಿ ಗಮನಿಸಿ, ನಿಮಗೆ ಅಲ್ಲಿ ಹೊರ ಬರುತ್ತಿರುವ ಬಿಳಿ ದ್ರವ ಕಾಣಿಸುತ್ತಿದೆಯೇ? ನಿಮಗೆ ಸಾಮಾನ್ಯವಾಗಿ ಕಾಂಡಗಳ ನಡುವೆ ಅಡಗಿಕೊಂಡಿರುವ ಹೊಳೆಯುವ ನೀಲಿ ಬಣ್ಣದ ಎಕ್ಕೆ ಜೀರುಂಡೆಗಳು ಅಥವಾ ಬಣ್ಣದ ಮಿಡತೆಗಳು ಕಾಣಬಹುದು. ಈ ಬಣ್ಣದ ಮಿಡತೆಗಳಿಗೆ ರಸಭರಿತ ಎಕ್ಕೆ ಎಲೆಗಳು ಆಹಾರವಾಗಿದೆ. ಹಾಗಾಗಿ ಈ ಮಿಡತೆಯನ್ನು ತಿನ್ನುವ ಇತರೆ ಪ್ರಾಣಿಗಳಿಗೆ ಇದು ಹಾನಿಕಾರಕವಾಗಿದೆ. ಈ ಮಿಡತೆ ತನ್ನ ಹೊಳೆಯುವ ಬಣ್ಣದಿಂದ, ಅದನ್ನು ತಿನ್ನುವ ಇತರೆ ಪ್ರಾಣಿಗಳಿಗೆ ತಾನು ಹಾನಿಕರ ಎಂದು ಎಚ್ಚರಿಸುತ್ತದೆ.

ಎಕ್ಕೆ ಗಿಡದ ಮೇಲೆ, ಗಿಡಹೇನುಗಳು- ಎಲೆಗಳ ಮತ್ತು ಕಾಂಡಗಳ ಮೇಲೆ ವಾಸಿಸುವ ಸಣ್ಣ ಬಿಳಿ ಅಥವಾ ಹಳದಿ ಕೀಟಗಳು ಕಂಡುಬರುವುದು ಸಾಮಾನ್ಯ. ಈ ಕೀಟಗಳ ಹತ್ತಿರ ಕೆಲವು ಇರುವೆಗಳನ್ನು ನೀವು ಖಚಿತವಾಗಿ ಕಾಣಬಹುದು. ಈ ಇರುವೆಗಳ ಮತ್ತು ಗಿಡಹೇನುಗಳ ಮಧ್ಯೆ ಒಂದು ವಿಶಿಷ್ಟ ಸಂಬಂಧವಿದೆ- ಗಿಡಹೇನುಗಳು ಸಸ್ಯದ ರಸವನ್ನು ಹೀರಿ 'ಹನಿಡ್ಯೂ' ಎಂಬ ಸಿಹಿ ತ್ಯಾಜ್ಯವನ್ನು ಹೊರಹಾಕುತ್ತವೆ. ಆ ತ್ಯಾಜ್ಯ ಇರುವೆಗಳ ಮೆಚ್ಚಿನ ಆಹಾರವಾಗಿದೆ, ಇದರ ಪ್ರತಿಯಾಗಿ, ಇರುವೆಗಳು ಗಿಡಹೇನುಗಳನ್ನು ಬೇರೆ ಕೀಟಗಳು ತಿನ್ನದಂತೆ ನೋಡಿಕೊಂಡು, ರಕ್ಷಿಸುತ್ತವೆ.

ನಿಮ್ಮ ಸುತ್ತಮುತ್ತಲಿನ ಜಾಗದಲ್ಲಿ ಬೆಳೆದಿರುವ ಎಕ್ಕೆ ಗಿಡವನ್ನು ಗಮನಿಸಿ - ಅದರ ಸುತ್ತಲೂ ಕಾಣುವ ಚಿಕ್ಕ ಅಥವಾ ದೊಡ್ಡ ಪ್ರಾಣಿ, ಕೀಟಗಳು ಯಾವುವು? ಆ ಅತಿಥಿಗಳ ಪಟ್ಟಿ ಮಾಡಿ ಅಥವಾ ಅವುಗಳ ಚಿತ್ರ ಬಿಡಿಸಿ.

ಚಿತ್ರಕಲೆ : ಲಬೊನಿ ರೊಯ್

ಈ ಉತ್ಪನ್ನವು ನೇಚರ್ ಕ್ಲಾಸ್ರೂಮ್ಸ್ ಸೇರಿದೆ CC BY SA 4.0